ಶ್ರೀ ಪಿ.ಎಂ. ನರೇಂದ್ರಸ್ವಾಮಿ [ಮಳವಳ್ಳಿ]:– ಮಾನ್ಯ ಅಧ್ಯಕ್ಷರೆ, ನಿನ್ನೆಯ ನನ್ನ ಪ್ರಶ್ನೆಗೆ ಇಂದು ಮಾನ್ಯ ನೀರಾವರಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದಿರಿ. ಅದರ ಬಗ್ಗೆ ಮಾನ್ಯ ನೀರಾವರಿ ಸಚಿವರು ಹೇಳಿಕೆಯೊಂದನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ [ಜಲಸಂಪನ್ಮೂಲ ಸಚಿವರು]– ಮಾನ್ಯ ಅಧ್ಯಕ್ಷರೆ, ಮಾನ್ಯ ನರೇಂದ್ರಸ್ವಾಮಿಯವರು ಪುರಿಗಾಲಿ ಏತ ನೀರಾವರಿ ಯೋಜನೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು. ನಾವು 2009–10ರ ಬಜೆಟ್‌ನ ಹೆಚ್ಚುವರಿ declarationನಲ್ಲಿ ಈ ಯೋಜನೆ ಬಗ್ಗೆ ಘೋಷಿಸಿದ್ದೆವು. ಈ ಯೋಜನೆಗೆ ಈಗಾಗಲೇ ನಾವು detailed survey ಮಾಡಿಸಿ, estimate ಮಾಡಿಸಿ, DPR ಕೂಡ ಮಾಡಿಸಿ, ನಮ್ಮ ತಾಂತ್ರಿಕ ಸಲಹಾ ಸಮಿತಿಯ ಮುಂದಿಟ್ಟು ಅನುಮೋದನೆಯನ್ನೂ ಸಹ ಪಡೆದುಕೊಂಡಿದ್ದೇವೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಹಂಚಿಕೆ ಬಗ್ಗೆ ಕಾನೂನಿನ ಅಭಿಪ್ರಾಯವನ್ನು ಪಡೆಯುವಂತೆ ಹಿಂದೆ ಬೋರ್ಡ್‌ನ ಆದೇಶವಾಗಿತ್ತು. ಆ ಹಿನ್ನೆಲೆಯಲ್ಲಿ ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಇವತ್ತು ಕಳಹಿಹಿಸಿದ್ದೇವೆ. ಅದರ ಜೊತೆಗೆ ನಮ್ಮ ದಿಲ್ಲಿಯ ಕಾನೂನು ಸೆಲ್‌ನ ವಕೀಲರ ಜೊತೆಗೂ ಸಹ ಈ ಬಗ್ಗೆ ಚರ್ಚೆ ಮಾಡಿ, ಇದಕ್ಕೆ ಕೂಡಲೇ ಒಂದು ಅಂತಿಮ ತೀರ್ಮಾನ ತೆಗೆದುಕೊಂಡು ಮುಂದಿನ ಎಲ್ಲಾ ಕ್ರಮಗಳನ್ನು ಜರುಗಿಸುತ್ತೇವೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ನೀಡಿದಂತಹ ಉತ್ತರ ತಾಂತ್ರಿಕವಾಗಿ ಮತ್ತು ಕಾನೂನಿನ ದೃಷ್ಟಿಯಲ್ಲಿ ಸರಿ ಎಂದು ಕಂಡರೂ ಕೂಡ, ಕಾವೇರಿ ನದಿ ಪಾತ್ರದ ಪಕ್ಕದಲ್ಲೇ ಇರತಕ್ಕಂಥ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ಮಳವಳ್ಳಿ ತಾಲ್ಲೂಕಿನಲ್ಲಿ ಕೆರೆ ಕಟ್ಟಿಗಳಿಗೆ ನೀರು ಬರದೇ ಇರತಕ್ಕಂಥ ಪರಿಸ್ಥಿತಿ ಇದೆ. ಈ ಯೋಜನೆಯನ್ನು ಸ್ವಲ್ಪ ಮಾರ್ಪಾಡು ಮಾಡಿ, ಕೆರೆಗಳಿಗೆ ನೀರು ಉಣಿಸತಕ್ಕಂಥ ಯೋಜನೆಗೆ ಅನುಮೋದನೆ ಕೊಡುವುದು ತುಂಬಾ ಅವಶ್ಯಕವಾದ ವಿಚಾರವಾಗಿದೆ. ಇದನ್ನು ಮಾಡುವುದಕ್ಕೆ ಯಾವುದೇ ಅಡ್ಡಿ ಆತಂಕಗಳು ಕಾನೂನಿನ ಅಡಿಯಲ್ಲಿ ಬರುವುದಿಲ್ಲ ಎಂದು ನನಗೆ ತಿಳಿದು ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಸದನದಲ್ಲಿ ಹೇಳಿಕೆ ನೀಡಬೇಕೆಂದ ಕೋರುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದಂತೆ, ಈ ಭಾಗದಲ್ಲಿ ಸಣ್ಣ ಹಿಡುವಳಿದಾರರಿದ್ದು, ವಾರ್ಷಿಕ ಮಳೆ ಪ್ರಮಾಣ averageಗಿಂತ ಕಡಿಮೆ ಇದೆ. ಸುಮಾರು 27 ಹಳ್ಳಿಗಳ 4084

ಹೆಕ್ಟೇರ್ ಪ್ರದೇಶಕ್ಕೆ ಇದರಿಂದ ಸೌಲಭ್ಯವನ್ನು ಕೊಡಬೇಕೆನ್ನುವ ಉದ್ದೇಶ ನಮ್ಮದಾಗಿದೆ. ಕಾವೇರಿ tribunal order, ನಮ್ಮ ಕಾನೂನು ಇಲಾಖೆ ಅಭಿಪ್ರಾಯ, ನಮ್ಮ ಬೋರ್ಡ್‌ನ resolution ಬಗ್ಗೆ ಕೂಡ ಮಾನ್ಯ ಸದಸ್ಯರಿಗೆ ಮಾಹಿತಿ ಇದೆ. ಕಾನೂನಿನ ತೊಂದರೆಯಾಗದಂತೆ, ಕಾನೂನಿನ ಚೌಕಟ್ಟಿನೊಳಗೆ ತಂದು, ಆ ಬರ ಪ್ರದೇಶಕ್ಕೆ ನೀರು ಕೊಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಜರುಗಿಸುತ್ತೇವೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್.ಸುರೇಶ್‌ಕುಮಾರ್[ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]:– ಮಾನ್ಯ ಅಧ್ಯಕ್ಷರೆ, ದಿನಾಂಕ:07.06.–2011ರ 2ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

[ಅನುಬಂಧ–1]

[2] ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

1. ವಿಷಯ: ಬೆಳಗಾವಿಯಲ್ಲಿ ನಿರ್ಮಿಸಲಾಗುತ್ತಿರುವ ಸುವರ್ಣ ಸೌಧ ಕಾಮಗಾರಿ ಬಗ್ಗೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ [ಮಳವಳ್ಳಿ]:– ಮಾನ್ಯ ಅಧ್ಯಕ್ಷರೆ, ಇಂದಿನ 'ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬಂದಿರತಕ್ಕ 'ವಿವಾದದ ಸುಳಿಯಲ್ಲಿ ಸುವರ್ಣ ಸೌಧ ಕಾಮಗಾರಿ' ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ವಿಶೇಷವಾಗಿ ಬೆಳಗಾವಿಯಲ್ಲಿ ನಿರ್ಮಾಣ ಆಗುತ್ತಿರುವ ಸುವರ್ಣ ಸೌಧ ಕಟ್ಟಡದ ಕಾಮಗಾರಿಗಳ ಅಂದಾಜು ಪಟ್ಟಿ 232 ಕೋಟಿ ರೂ.ಗಳಿಂದ 370 ಕೋಟಿ ರೂ.ಗಳಿಗೆ ತಲುಪಿರುವ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿರುವುದಲ್ಲದೆ ಸಂಬಂಧಪಟ್ಟ ಇಲಾಖೆ ಸಚಿವರ ಮೇಲೆ ಗುಮಾನಿಯನ್ನೂ ಸಹ ವರದಿಯಲ್ಲಿ ವ್ಯಕ್ತಪಡಿಸಲಾಗಿದೆ. ಅವರ ಸಂಬಂಧಿಕರು ಇದರಲ್ಲಿ ಪಾತ್ರ ವಹಿಸಿದ್ದಾರೆ ಎಂಬುದನ್ನೂ ಇದರಲ್ಲಿ ಗಮನಕ್ಕೆ ತರುತ್ತಾ, ಅಲ್ಲಿ AEE ಒಬ್ಬರು PWD norms ಪ್ರಕಾರ ಕಾಮಗಾರಿಯನ್ನು ನಿಗದಿಪಡಿಸುತ್ತಿದ್ದರೆ, Superintending Engineerರೊಬ್ಬರು ಈ ವಿಚಾರದಲ್ಲಿ ಆ ಕೆಳ ಅಧಿಕಾರಿ ಮೇಲೆ ಹಲ್ಲೆಯನ್ನು ನಡೆಸಿ, ಬೆದರಿಕೆಯನ್ನು ಒಡ್ಡಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿದೆ. ನಾನು